O.S.No.:122/2016
P.W.:1

ಈ ದಿನ ದಿಃ06.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ ಎಸಿಸಿ ವಕೀಲರಿಂದಃ**

ನಮ್ಮ ತಂದೆಗೆ ಇಬ್ಬರು ಜನ ಹೆಂಡತಿಯರಿದ್ದು, ಸದರಿ ಇಬ್ಬರು ಹೆಂಡತಿಯರಿಗೆ ಒಟ್ಟು 6 ಜನ ಮಕ್ಕಳಿದ್ದು, ಅವರು ಪ್ರತ್ಯೇಕವಾಗಿ ವಾಸವಿರುತ್ತೇವೆ ಎಂದರೆ ಸರಿ. ನಮ್ಮ ತಂದೆಗೆ ಸೇರಿದ ಸ್ವತ್ತುಗಳನ್ನು ನಾವು 6 ಜನರು ಪ್ರತ್ಯೇಕವಾಗಿ ಅವರವರ ಕ್ಷೇತ್ರಗಳಲ್ಲಿ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿ.

ನನ್ನ ತಂದೆ ದಿ.25.04.1949 ರಂದು ಕ್ರಯಕ್ಕೆ ಪಡೆದ ಸರ್ವೆ ನಂ.18 ಪೋಡಿ ದುರಸ್ತಿಯಾಗಿ ಸರ್ವೆ ನಂ.131 ಎಂದು ಹೊಸ ನಂಬರ್ ನನ್ನ ತಂದೆ ಕ್ರಯಕ್ಕೆ ಪಡೆದ ನಂತರ ಆಗಿರುತ್ತದೆ. ಸರ್ವೆ ನಂ.18 ಇದ್ದದ್ದು, 1939 ರಲ್ಲಿಯೇ ಪೋಡಿ ದುರಸ್ತಿಯಾಗಿ ಸರ್ವೆ ನಂ.131 ಎಂದು ಆಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ತಂದೆ 1980 ರಲ್ಲಿ ಮೃತರಾಗಿರುತ್ತಾರೆ. ನನ್ನ ತಂದೆ ಕ್ರಯಕ್ಕೆ ಪಡೆದ ಸ್ವತ್ತು ಮತ್ತು ಅವರ ಮರಣವಾದ ವರ್ಷದ ನಡುವೆ 31 ವರ್ಷ ಅಂತರ ಇದೆ ಎಂದರೆ ಸರಿ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ನಮ್ಮ ತಂದೆ ಕ್ರಯಕ್ಕೆ ಪಡೆದು 70 ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ದಿ.19.7.2007 ರಲ್ಲಿ ಭೋಗ್ಯರದ್ದತಿ ಪತ್ರವನ್ನು ನಂದ್ ಕುಮಾರ್ ಮತ್ತು ಕೃಷ್ಣಮೂರ್ತಿ ಮಾಡಿಕೊಟ್ಟಿದ್ದು, ಅವರ ವಯಸ್ಸನ್ನು ನನಗೆ ನಿಖರವಾಗಿ ಹೇಳಲು

ಬರುವುದಿಲ್ಲ, ಆದರೆ ನಂದ್ ಕುಮಾರ್ ಅಂದಾಜು ನನ್ನ ವಯಸ್ಸಿನವರಿದ್ದು, ಕೃಷ್ಣಮೂರ್ತಿ ನನಗಿಂತ ಕಡಿಮೆ ವಯಸ್ಸಿನವರು ಇದ್ದರು ಎಂದು ನುಡಿಯುತ್ತಾರೆ. ನನಗೆ ಈಗ 60 ವರ್ಷ ವಯಸ್ಸು ಇರುತ್ತದೆ. ಮರಿಸಿದ್ದಯ್ಯ ಇವರಿಗೆ ಎಷ್ಟು ಜನ ಮಕ್ಕಳಿರುವುದು ನನಗೆ ಗೊತ್ತಿರುವುದಿಲ್ಲ, ಆದರೆ ಅವರ ಇಬ್ಬರೂ ಮಕ್ಕಳು ನಂದ್ ಕುಮಾರ್ ಮತ್ತು ಕೃಷ್ಣಮೂರ್ತಿ ಮಾತ್ರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸದರಿಯವರು ಕೋಣಸಂದ್ರ ಗ್ರಾಮದವರಾಗಿರುತ್ತಾರೆ. ನಮ್ಮ ಗ್ರಾಮ ಮತ್ತು ಕೋಣಸಂದ್ರ ಗ್ರಾಮ ಒಂದಕ್ಕೊಂದು ಹೊಂದಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಮರಿಸಿದ್ದಯ್ಯ ಇವರಿಗೆ ಇಬ್ಬರು ಮಕ್ಕಳನ್ನು ಹೊರತುಪಡಿಸಿ ಬೇರೆ ಮಕ್ಕಳು ಇರುತ್ತಾರೆ ಎಂದರೆ ಇರಬಹುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಭೋಗ್ಯ ಪತ್ರವನ್ನು ರದ್ದತಿ ಮಾಡಿದ ನಂತರ ಮೂಲ ಭೋಗ್ಯಪತ್ರವನ್ನು ನನ್ನ ತಂದೆ ಹಿಂಪಡೆದಿರುತ್ತಾರೆ. ನನ್ನ ತಂದೆ ಹಿಂಪಡೆದ ಭೋಗ್ಯಪತ್ರವನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುವುದಿಲ್ಲ, ಅದು 1 ನೇ ವಾದಿ ಅವರಿಗೆ ನೀಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ. ಆದರೆ ನಾನು ಸದರಿ ಭೋಗ್ಯಪತ್ರವನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

1949 ರ ಮೂಲ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯಕ್ಕೆ ಮೂಲ ಕ್ರಯಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೂಲಕ್ರಯಪತ್ರವನ್ನು ನಮ್ಮ ಅಣ್ಣ 1 ನೇ ವಾದಿ ನನಗೆ ತೋರಿಸಿರುತ್ತಾರೆ. ನನ್ನ ಅಣ್ಣ ತನ್ನ ಪರವಾಗಿ ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿರುವುದಿಲ್ಲ. ನನ್ನ ಪರ ಸಾಕ್ಷಿ ನುಡಿಯಲು ನನ್ನ ಅಣ್ಣ ನನಗೆ ಹೇಳಿರುವುದಿಲ್ಲ. 1 ನೇ ವಾದಿ ಈಗ ನ್ಯಾಯಾಲಯಕ್ಕೆ ಬರುತ್ತಿಲ್ಲ ಎಂದರೆ ಸರಿ.

O.S.No.:122/2016
P.W.:1

ನ್ಯಾಯಾಲಯಕ್ಕೆ ಸಲ್ಲಿಸಿರುವ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ 2 ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಸರ್ವೆ ನಂ.18 ರಲ್ಲಿ ಕ್ರಯಕ್ಕೆ ಪಡೆದ ಸ್ವತ್ತು ದುರಸ್ತಿಯಾದ ನಂತರ 130 ಎಂದು ಆಗಿರುತ್ತದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸುಳ್ಳು ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ದಿ.10.04.1974 ರಂದು ನನ್ನ ಅಣ್ಣ ಮಹದೇವಯ್ಯ ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.25.04.1974 ರಲ್ಲಿ ನನ್ನ ಅಣ್ಣ ದ್ಯಾವಯ್ಯ ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ಭೋಗ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿ.20.07.1976 ರಂದು ನನ್ನ ಅಣ್ಣ ದ್ಯಾವಯ್ಯ ಸರ್ವೆ ನಂ.130 ರಲ್ಲಿ 20 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರಗಳಲ್ಲಿ ಸ್ವತ್ತಿನ ಚಕ್ಕುಬಂದಿಯಲ್ಲಿ ಸರ್ವೆ ನಂ.131 ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

ಸರ್ವೆ ನಂ.130 ರಲ್ಲಿನ ನಮ್ಮ ಸ್ವತ್ತುಗಳನ್ನು ನಾವು ಮಾರಾಟ ಮಾಡಿ ಈಗ ಸರ್ವೆ ನಂ.131 ರ ಕುರಿತಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ.131 ರಲ್ಲಿ ಪ್ರತಿವಾದಿಗಳ ತಂದೆಯ ಹೆಸರು ದಾಖಲಾಗದೆ ಇರುವುದರ ಲಾಭ ಪಡೆದುಕೊಂಡು ಭೋಗ್ಯಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಂದಕುಮಾರ್ ಮತ್ತು ಕೃಷ್ಣಮೂರ್ತಿ ಇವರೊಂದಿಗೆ ನಾವು ಸೇರಿಕೊಂಡು ಸುಳ್ಳು ಭೋಗ್ಯ ರದ್ದತಿ ಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಭೋಗ್ಯ ರದ್ದತಿ ಪತ್ರವನ್ನು ನಾವು ಮೂರು ಜನರು ಮಾಡಿಕೊಂಡಿರುತ್ತೇವೆ ಎಂದರೆ ಸರಿ.

O.S.No.:122/2016
P.W.:1

ನಮ್ಮ ಅಣ್ಣ  ದ್ಯಾವಣ್ಣ ದಾವೆಯಲ್ಲಿ ಪಕ್ಷಕಾರರಿರುವುದಿಲ್ಲ ಎಂದರೆ ಸರಿ. ದ್ಯಾವಯ್ಯ ತೀರಿಕೊಂಡ ದಿನಾಂಕ ಹೇಳಲು ಬರುವುದಿಲ್ಲ, ಅಂದಾಜು 12 ವರ್ಷ ಆಗಿರುತ್ತದೆ.  ನನ್ನ ಅಣ್ಣ ದ್ಯಾವಯ್ಯ ದಾವಾಸ್ವತ್ತಿನಲ್ಲಿ ಹಕ್ಕು ಇದ್ದಲ್ಲಿ ಅವರು ಸಹ ಪಕ್ಷಕಾರರಾಗುತ್ತಿದ್ದರು ಎಂದರೆ ಸಾಕ್ಷಿಯು ದಾವೆ ಸಲ್ಲಿಸುವ ಕಾಲಕ್ಕೆ ಸದರಿ ದ್ಯಾವಯ್ಯ ಮೃತರಾಗಿದ್ದು, ಅವರ ಹೆಂಡತಿ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂ.18 ರಲ್ಲಿ 2 ಎಕರೆ ಜಮೀನು ಅವರ 6 ಜನ ಮಕ್ಕಳಲ್ಲಿ ನಿರ್ದಿಷ್ಟವಾಗಿ ಇವರಿಗೆ ಹೋಗಬೇಕು ಎಂದು ಯಾವುದೇ ಪತ್ರ ಬರೆದಿರುವುದಿಲ್ಲ ಎಂದರೆ ಸರಿ.  ದಾವಾಸ್ವತ್ತು ಪ್ರತಿವಾದಿಯರಿಗೆ ಸೇರಿದ್ದರಿಂದ ನಮ್ಮ ಇಬ್ಬರನ್ನು ಹೊರತುಪಡಿಸಿ ಉಳಿದ ನಾಲ್ಕು ಜನರು ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸದರಿ 6 ಜನರಲ್ಲಿ ಒಬ್ಬಳು ಹೆಣ್ಣು ಮಗಳು ಇದ್ದು, ದ್ಯಾವಣ್ಣನ ಹೆಂಡತಿ ಬಂದಿರುವುದಿಲ್ಲ, ಉಳಿದವರು ದಾವೆ ಸಲ್ಲಿಸಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದಿಯರು ಎಸಿ ನ್ಯಾಯಾಲಯದಲ್ಲಿ ಆರ್.ಎ.25/2009-10 ನ್ನು ದಾಖಲಿಸಿದ್ದು, ಸದರಿ ಮೇಲ್ಮನವಿ ಪ್ರತಿವಾದಿಯರ ಪರ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ.  ಸದರಿ ಎಸಿ ನ್ಯಾಯಾಲಯದ ಆದೇಶವನ್ನು ಡಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಿ ಪ್ರಕರಣ ಚಾಲ್ತಿಯಲ್ಲಿರುವಾಗ ಸದರಿ ಎಸಿ ನ್ಯಾಯಾಲಯದ ಆದೇಶದಂತೆ ಖಾತೆ ರದ್ದಾಗಿದ್ದರೂ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ.  ಡಿಸಿ ನ್ಯಾಯಾಲಯದಲ್ಲಿನ ಪ್ರಕರಣಕ್ಕೆ ನನ್ನ ಸಹಿ ಪಡೆದಿರುತ್ತಾರೆ, ಆದರೆ ನಾನು ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.  ನಾವು ದಾವಾಸ್ವತ್ತನ್ನು ಮಾರಾಟ ಮಾಡುವುದಕ್ಕೆ ನ್ಯಾಯಾಲಯದಿಂದ ಪರವಾನಿಗೆ ಪಡೆದಿರುವುದಿಲ್ಲ. ನ್ಯಾಯಾಲಯಕ್ಕೆ ತಿಳಿಯದಂತೆ ಮಾರಾಟ ಮಾಡಿರುತ್ತೇವೆ ಎಂದರೆ ಹಣದ ಅವಶ್ಯಕತೆ ಇದ್ದುದ್ದರಿಂದ ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

ಸದರಿ ದಿ.19.08.2022 ರ ಕರಾರು ಪತ್ರಕ್ಕೆ 1 ನೇ ವಾದಿ ಶಿವಣ್ಣ ವ್ಯವಹಾರಕ್ಕೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಬೇರೆ ಯಾವುದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ಈ ದಾವೆ ನಡೆಯುತ್ತಿರುವ ವಿಚಾರ ನನ್ನ ಅಣ್ಣ ಮಹದೇವಯ್ಯ ಇವರಿಗೆ ಗೊತ್ತಿರುತ್ತದೆ ಎಂದರೆ ಸರಿ. ದಿ.19.08.2022 ರಂದು ನಾನು ಮತ್ತು ಮಹದೇವಯ್ಯ ಸೇರಿಕೊಂಡು ನಮಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಈಗಲೂ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಇರುತ್ತೇವೆಂದು ನುಡಿಯುತ್ತಾರೆ.

O.S.No.:122/2016
P.W.:1

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.